# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆಃ** 5028/2024 ಫ್ರಾಸಾ-03

ಚಾಸಾ-08

ದಿನಾಂಕಃ 08-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಂಗಯ್ಯ |
| **ತಂದೆಯ / ಗಂಡನ ಹೆಸರು** | ತಿಪ್ಪಣ್ಣ |
| **ವಯಸ್ಸು** | 35 |
| **ಉದ್ಯೋಗ** | ಕೂಲಿ |
| **ವಾಸಸ್ಥಳ** | ದೇವರಬೆಟ್ಟ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಮೃತ ರತ್ನಮ್ಮ ಮತ್ತು ಆರೋಪಿಯ ಮನೆ ನಮ್ಮ ಮನೆಯ ಪಕ್ಕದಲ್ಲಿರುತ್ತದೆ. ಆರೋಪಿಗೆ ಮದ್ಯಪಾನ ಸೇವನೆ ಮಾಡುವ ಚಟ ಇರುತ್ತದೆ. ಆರೋಪಿ ಮತ್ತು ರತ್ನಮ್ಮ ಇಬ್ಬರ ನಡುವೆ ಸಂಬಂಧ ಅನೂನ್ಯವಾಗಿತ್ತು. ರತ್ನಮ್ಮ ಜೀವಂತ ಇರುವುದಿಲ್ಲ. ಆಕೆ ಯಾವ ರೀತಿ ತೀರಿಕೊಂಡಿಕೊಂಡಿದ್ದಾಳೆ ಮತ್ತು ಆಕೆಯ ಸಾವಿಗೆ ಕಾರಣ ಎಂದು ನನಗೆ ಗೊತ್ತಿಲ್ಲ. ರತ್ನಮ್ಮ 2 ವರ್ಷದ ಹಿಂದೆ ಮೃತಪಟ್ಟಿರುತ್ತಾಳೆ. ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-**

ಆರೋಪಿಗೆ ಕುಡಿಯುವ ಅಭ್ಯಾಸವಿತ್ತು, ರತ್ನಮ್ಮ ದುಡಿದು ತಂದ ಹಣವನ್ನು ಕುಡಿಯಲು ಆರೋಪಿಗೆ ಕೊಡದೇ ಇದ್ದಾಗ ಆರೋಪಿ ಅವಳ ಮೇಲೆ ಗಲಾಟೆ ಮಾಡಿ ನೇಣು ಹಾಕಿಕೊಂಡು ಸಾಯಿ ಎಂದು ಪ್ರಚೋದನೆ ನೀಡುತ್ತಿದ್ದ ಎಂದರೆ ಸರಿಯಲ್ಲ.

ನಾವು ಆರೋಪಿಗೆ ಈ ರೀತಿ ಬೈಯ್ಯಬೇಡ ಗಲಾಟೆ ಮಾಡಬೇಡ ಎಂದು ಬುದ್ದಿವಾದ ಹೇಳಿದ್ದೇವು ಆದರೂ ಆರೋಪಿ ತನ್ನ ಚಾಳಿಯನ್ನು ಮುಂದುವರೆಸಿದ್ದ ಎಂದರೆ ಸರಿಯಲ್ಲ.

ನನ್ನ ತಾಯಿ ಲಕ್ಷ್ಮಮ್ಮಳನ್ನು ವಿಚಾರ ಮಾಡಿದಾಗ ಅವಳು ತಿಳಿಸಿದ್ದೇನೆಂದರೆ ದಿ. 04.04.2024 ರಂದು 4-30 ಗಂಟೆಗೆ ನಾನು ಮತ್ತು ನಮ್ಮ ಊರಿನ ನಾಗಮ್ಮ ಇಬ್ಬರು ಮನೆಯ ಮುಂದೆ ಕುಳಿತು ಮಾತನಾಡುತ್ತಿದ್ದಾಗೆ ಆರೋಪಿ ಕುರಿಗಳನ್ನು ಹೊಡೆದುಕೊಂಡು ಮನೆಗೆ ಬಂದಿದ್ದು ಅವರ ಮನೆಯಲ್ಲಿದ್ದ ರತ್ನಮ್ಮಳ ಬಳಿ ಹೋಗಿ ಮದ್ಯ ಸೇವನೆ ಮಾಡಲು 50/- ರೂ ಹಣ ಕೇಳಿದ್ದು , ರತ್ನಮ್ಮ ನನ್ನ ಹತ್ತಿರ ದುಡ್ಡು ಇಲ್ಲ ಎಂದು ಹೇಳಿದಾಗ ಕಿವಿಯಲ್ಲಿರುವ ಗುಂಡು ಬಿಚ್ಚಿಕೊಡು ಎಂದು ಕೇಳಿದ್ದು ಅವಳು ಕೊಡದೇ ಒಪ್ಪದೇ ಇದ್ದಾಗ ಆರೋಪಿ ಅವಾಚ್ಯ ಶಬ್ದಗಳಿಂದ ಬೈದು ನೀನು  ನೇಣು ಹಾಕಿಕೊಂಡು ಸತ್ತರೆ ನನಗೆ ನೆಮ್ಮದಿ ಸಿಗುತ್ತದೆ ಎಂದು ಬೈದು ಮನೆ ಹೊರಬೆ ಬಂದು ಕೂತಿಕೊಂಡನು. ಸ್ವಲ್ಪ ಹೊತ್ತಿನಲ್ಲಿ ಮನೆ ಒಳಗೆ ಹೋದ ರಾಹುಲ್ ಅಜ್ಜಿ ಅಮ್ಮ ಉರುಳು ಹಾಕಿಕೊಂಡಿದ್ದಾರೆ ಎಂದು ಕೂಗಿದ ತಕ್ಷಣ ನಾನು, ರಾಹುಲ್ , ಈರಣ್ಣ , ನಾಗಮ್ಮ ಹೋಗಿ ನೋಡಲಾಗಿ ಅಡಿಗೆ ಕೋಣೆಯಲ್ಲಿ ಶೀಟ್ ಗೆ ಹಾಕಿದ್ದ ಕಬ್ಬಿಣದ ಪೈಪ್ ಗೆ ಸೀರೆ ಯಿಂದ ನೇಣು ಹಾಕಿಕೊಂಡಿರುವುದು ಅಕ್ಕ ಪಕ್ಕದ ಮನೆಯವರು ಮತ್ತು ನಾನು ರತ್ನಮ್ಮಳನ್ನು ನೇಣು ಕುಣಿಕೆಯಿಂದ ಇಳಿಸಿದೇವು ಎಂದು ನನ್ನ ತಾಯಿ ನನಗೆ ತಿಳಿಸಿದಳು.  ಆಸ್ಪತ್ರೆಗೆ ಆಂಬುಲೆಯನ್ಸ್ ನಲ್ಲಿ ಕರೆದುಕೊಂಡು ಹೋಗಿದ್ದು , ದಾರಿ ಮದ್ಯದಲ್ಲಿ ರತ್ನಮ್ಮ ರಾತ್ರಿ 10-30 ಗಂಟೆಗೆ ತೀರಿಕೊಂಡಿರುತ್ತಾಳೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಶ್ರೀ. ಪಿ.ಎನ್.ಆರ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**